## ರೇಷ್ಮೆ ಮಾರುಕಟ್ಟೆಯಲ್ಲಿ ನ್ಯಾಯಬೆಲೆಗೆ ರೈತರಿಂದ ರೇಷ್ಮೆ ಗೂಡನ್ನು ಖರೀದಿಸುವ ಬಗ್ಗೆ

**181:** ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ):– ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರೇಷ್ಮೆ ಮಾರುಕಟ್ಟೆಯಲ್ಲಿ ನ್ಯಾಯಬೆಲೆಗೆ ರೈತರಿಂದ ರೇಷ್ಮೆ ಗೂಡನ್ನು ಖರೀದಿಸಲಾಗಿವೆಯೇ;

ಆ. ರೇಷ್ಮೆ ಮಾರುಕಟ್ಟೆಯಲ್ಲಿರುವ ಅಧಿಕಾರಿಗಳು ಮತ್ತು ಖಾಸಗಿ ಟ್ರೇಡರ್ಸ್‌ಗಳಿಗೂ ಇರುವ ಸಂಬಂಧವೇನು;

ಇ. ರೇಷ್ಮೆ ಮಾರುಕಟ್ಟೆಯಲ್ಲಿ ರೈತನ ಉತ್ಪಾದನೆಗೆ ತಕ್ಕಂತಹ ಬೆಲೆ ಸಿಗುತ್ತದೆಯೇ;

ಈ. ರೇಷ್ಮೆ ಇಲಾಖೆಯವರು ರೈತರಿಗೆ ವಿತರಿಸುತ್ತಿರುವ ಮೊಟ್ಟೆಗಳು ರೋಗ ರಹಿತವಾಗಿದೆಯೇ ? ಹಾಗೂ ರೋಗದ ಮೊಟ್ಟೆಗಳಿಂದ ತೀವ್ರ ನಷ್ಟಕ್ಕೆ ಒಳಗಾಗಿರುವುದು ನಿಜವೇ;

ಉ. ಬಡ ರೇಷ್ಮೆ ನೇಕಾರರಿಗೆ, ಸಬ್ಸಿಡಿ ದರದಲ್ಲಿ ರೇಷ್ಮೆ ಕಚ್ಚಾ ಮಾಲನ್ನು ವಿತರಿಸಲು ಸಾಧ್ಯವಾಗುವುದಿಲ್ಲವೇ ?

ಡಾ. ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು):–

ಅ. ನೂಲು ಬಿಚ್ಚಾಣಿಕೆದಾರರು ರೈತರಿಂದ ರೇಷ್ಮೆ ಗೂಡನ್ನು ಸ್ಪರ್ಧಾತ್ಮಕ ಬೆಲೆಗೆ ಖರೀದಿಸುತ್ತಿದ್ದಾರೆ.

ಆ. ಮಾರುಕಟ್ಟೆಯಲ್ಲಿರುವ ಅಧಿಕಾರಿಗಳು ನೂಲು ಬಿಚ್ಚಾಣಿಕೆದಾರರು ಮಾರುಕಟ್ಟೆಯಲ್ಲಿ ಗೂಡನ್ನು ಕೊಳ್ಳಲು ಹಾಗೂ ರೈತರು ಗೂಡನ್ನು ಮಾರಾಟ ಮಾಡಲು ವ್ಯವಸ್ಥೆ ಮಾಡಿ, ಗೂಡನ್ನು ಬಹಿರಂಗ ಹರಾಜು ಮಾಡಿ ನೂಲು ಬಿಚ್ಚಾಣಿಕೆದಾರರು ಕೂಗಿದ ಬೆಲೆಗೆ ರೈತರು ಒಪ್ಪಿದ್ದಲ್ಲಿ ಆ ಗೂಡನ್ನು ತೂಕ ಮಾಡಿಸಿ ನೂಲು ಬಿಚ್ಚಾಣಿಕೆದಾರರಿಂದ ಹಣವನ್ನು ರೈತರಿಗೆ ಕೊಡಿಸಿ ಗೂಡನ್ನು ಬಿಚ್ಚಾಣಿಕೆದಾರರಿಗೆ ಬಿಡುಗಡೆ ಮಾಡುತ್ತಾರೆ. ಇದಲ್ಲದೆ ಬೇರೆ ಯಾವುದೇ ಸಂಬಂಧ ಇರುವುದಿಲ್ಲ.

ಇ. ಉತ್ಪಾದನೆಗೆ ತಕ್ಕಂತಹ ಸ್ಪರ್ಧಾತ್ಮಕ ಬೆಲೆ ಸಿಗುತ್ತದೆ.

ಈ. ರೈತರಿಗೆ ರೋಗರಹಿತ ಮೊಟ್ಟೆಗಳನ್ನು ವಿತರಣೆ ಮಾಡುತ್ತಿದೆ. ಇದರಿಂದ ರೈತರಿಗೆ ನಷ್ಟ ಆಗಿಲ್ಲ.

ಉ. ರೇಷ್ಮೆ ಕಚ್ಚಾ ಮಾಲನ್ನು ರಿಯಾಯಿತಿ ದರದಲ್ಲಿ ಪೂರೈಸುವ ಉದ್ದೇಶ ಸದ್ಯಕ್ಕೆ ಇರುವುದಿಲ್ಲ.

## ಚಿಕ್ಕೋಡಿ ಪಟ್ಟಣದಲ್ಲಿ ಆಶ್ರಯ ಯೋಜನೆಯಡಿಯಲ್ಲಿ ನಿರ್ಮಿಸಲಾಗುವ ಗೃಹಗಳಿಗೆ ಸರ್ಕಾರಿ ಜಮೀನನ್ನು ನೀಡದಿರುವ ಬಗ್ಗೆ

**237:** ಶ್ರೀ ಎಸ್.ಎಸ್. ಭೀಮಣ್ಣನವರ್ (ಚಿಕ್ಕೋಡಿ):– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಚಿಕ್ಕೋಡಿ ಪಟ್ಟಣದಲ್ಲಿ 'ಆಶ್ರಯ' ಯೋಜನೆಯಡಿಯಲ್ಲಿ ನಿರ್ಮಿಸಲಾಗುವ ಗೃಹಗಳಿಗಾಗಿ ಸರ್ಕಾರಿ ಜಮೀನನ್ನು ನೀಡದಿರುವುದು ನಿಜವೆ;

ಆ. ಹಾಗಿದ್ದಲ್ಲಿ ಸದರಿ ಯೋಜನೆಯ ಅನುಷ್ಠಾನ ಕಷ್ಟಸಾಧ್ಯವಾಗುವುದಿಲ್ಲವೆ;

ಇ. ಜಮೀನು ಬಿಡುಗಡೆಗಾಗಿ ಬೇಕಾಗಿರುವ ಕಾಲಾವಧಿಯೆಷ್ಟು ? ಹಾಗೂ ಎಂದು ಬಿಡುಗಡೆ ಮಾಡಲಾಗುವುದು ?

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು):–

ಅ. ಇಲ್ಲ. ದಿನಾಂಕ 4.3.93ರಂದು ಆಶ್ರಯ ಯೋಜನೆಯಡಿಯಲ್ಲಿ ನಿವೇಶನ ಹಂಚಲು ಚಿಕ್ಕೋಡಿ ಪುರಸಭೆಗೆ ಭೂಮಿಯನ್ನು ಬಿಡುಗಡೆ ಮಾಡಿ ಬೆಳಗಾಂ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

## ಆಶ್ರಯ ಯೋಜನೆಯ ಅವ್ಯವಹಾರ

**687:** ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಆಶ್ರಯ ಯೋಜನೆಯ ಅನುಷ್ಠಾನದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ನಡೆಸಿದ ವಿಚಾರಣೆಯ ವರದಿ ಸರ್ಕಾರಕ್ಕೆ ಬಂದಿದೆಯೇ;

ಆ. ಬಂದಿದ್ದಲ್ಲಿ, ವರದಿಯನ್ನು ಆಧರಿಸಿ ಸರ್ಕಾರ ಏನು ಕ್ರಮ ತೆಗೆದುಕೊಳ್ಳುವುದು ?

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು):–

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

## ಪರಿಶಿಷ್ಟ ಜಾತಿ ಮತ್ತು ವರ್ಗಗಳ ವಿದ್ಯಾರ್ಥಿನಿಲಯಗಳ ಕಟ್ಟಡಗಳ ದುಸ್ಥಿತಿ ಕುರಿತು

**773:** ಶ್ರೀ ಆಂಜನಮೂರ್ತಿ (ನೆಲಮಂಗಲ):– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ 1992–93ರ ಆಯವ್ಯಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ವಿದ್ಯಾರ್ಥಿನಿಲಯಗಳ ಎಷ್ಟು ಕಟ್ಟಡಗಳಿಗೆ, ಹಾಗೂ ಎಷ್ಟು ಹಣವನ್ನು ನಿಗದಿ ಮಾಡಲಾಗಿದೆ ? (ಪೂರ್ಣ ವಿವರಗಳನ್ನೊದಗಿಸುವುದು);

ಆ. ಹಳೇ ವಿದ್ಯಾರ್ಥಿನಿಲಯಗಳನ್ನು ದುರಸ್ತಿ ಮಾಡಲು ಎಷ್ಟು ಹಣವನ್ನು ನಿಗದಿ ಪಡಿಸಲಾಗಿದೆ ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ. 1992–93ನೇ ಸಾಲಿನ ಆಯವ್ಯದಲ್ಲಿ 85 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕಾಗಿ ಒಟ್ಟು 620.86 ಲಕ್ಷ ರೂ.ಗಳನ್ನು ನಿಗದಿಪಡಿಸಿದೆ. ವಿವರ ಕೆಳಕಂಡಂತಿದೆ.